O.S. No.77/13 PW.1 Dated 18-09-2019

ದಿಃ 18-09-2019 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು 1 ನೇ ಪ್ರತಿವಾದಿ ಪರ ಶ್ರೀ ಹೆಚ್ ಎಸ್ ಎಂ ವಕೀಲರಿಂದಃ-

1. ನನ್ನ ಅಜ್ಜ ಸಿದ್ದಲಿಂಗೇಗೌಡರು, ಅವರು ಯಾವಾಗ ತೀರಿಕೊಂಡಿದ್ದಾರೆ ಗೊತ್ತಿಲ್ಲ, ಅಂದಾಜು 45 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ನನ್ನ ತಂದೆಗೆ 79 ವರ್ಷ ವಯಸ್ಸು. ಅವರಿಗೆ ಹುಷಾರಿಲ್ಲ. ಅವರು ಬೆಳ್ಳೂರಿನಲ್ಲೆ ಇದ್ದಾರೆ. ಅವರು ನನ್ನೊಂದಿಗೆ ವಾಸವಿಲ್ಲ. ಈ ದಾವೆಯನ್ನು ತಂದೆಯ ಪರವಾಗಿ ಹಾಕಿದ್ದೇನೆ. ಈ ದಾವೆ ಹೂಡುವ ಮೊದಲು ಜಿ ಪಿ ಎ ಕೊಟ್ಟಿರಲಿಲ್ಲ. ಅದನ್ನು ಇತ್ತೀಚೆಗೆ 8-9 ತಿಂಗಳ ಹಿಂದೆ ಕೊಟ್ಟಿದ್ದಾರೆ. 1 ನೇ ಪ್ರತಿವಾದಿ ನನ್ನ ದೊಡ್ಡಪ್ಪ. ನನ್ನ ತಂದೆಗೆ 4 ಜನ ಅಣ್ಣತಮ್ಮಂದಿರು ಹಾಗೂ 3 ಜನ ಅಕ್ಕತಂಗಿಯರಿದ್ದಾರೆ. ನನ್ನ ತಂದೆಗೆ ಓಡಾಡಲು ಆಗುವುದಿಲ್ಲ ಮತ್ತು ಕಿವಿ ಕೇಳುವುದಿಲ್ಲ. ವೈದ್ಯರಲ್ಲಿ ತೋರಿಸಿದ ಬಗ್ಗೆ ದಾಖಲೆ ಇದೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ.

2. ದಾವೆ ಹೂಡಲು ನನ್ನ ತಂದೆಯೇ ಮಾಹಿತಿ ಕೊಟಿದ್ದಾರೆ. ನನಗೆ 48 ವರ್ಷ ವಯಸ್ಸು. 1973 ರಲ್ಲಿ ಜನಿಸಿದ್ದೇನೆ. ನಾನು ಹುಟ್ಟುವ ಮೊದಲು ನನ್ನ ತಂದೆಯ ಕುಟುಂಬದಲ್ಲಾದ ವ್ಯವಹಾರದ ಬಗ್ಗೆ ನನಗೆ ನನ್ನ ತಂದೆ ಹೇಳಿದ್ದಾರೆ. 1 ನೇ ಪ್ರತಿವಾದಿ ಈ ದಾವೆಯಲ್ಲಿ ಏನೆಂದು ಹೇಳಿಕೆ ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ನಮ್ಮ ಕುಟುಂಬದ ವಂಶವೃಕ್ಷವಿದೆ ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ನಾನು ವ್ಯವಸಾಯ ಮಾಡುತ್ತೇನೆ. ದಾವಾಸ್ತಿಗಳು ಹೊಳೆಬೆಳ್ಳೂರು ಗ್ರಾಮದಲ್ಲಿದೆ. ಸಿದ್ದಲಿಂಗೇಗೌಡರ ಮೊದಲ ಮಗ ನಂಜುಂಡಪ್ಪ ಅವರು ಅಂದಾಜು 1971-72 ರಲ್ಲಿ ತೀರಿಕೊಂಡಿದ್ದಾರೆ. ನನ್ನ ತಂದೆ 3 ನೇಯವರು, ಮೊದಲನೆ ಪ್ರತಿವಾದಿ 2 ನೇ ಮಗ. ದಾವಾಸ್ತಿಗಳಲ್ಲಿ ಕೆಲವು 1 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆಯಾಗಿದೆ ಎಂದು ತಂದೆ ಬರೆಸಿದ್ದಾರಾ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ 3 ಜನ ಮಕ್ಕಳು. ನನ್ನ ತಂದೆ ದಿಃ 26-04-1970 ಆದ ಪಾಲುಪಾರಿಕತ್ತಿನ ಬಗ್ಗೆ ನನ್ನಲ್ಲಿ ತಿಳಿಸಿಲ್ಲ. ಒಟ್ಟು 6 ಸರ್ವೆ ನಂಬರ್ ಗಳಲ್ಲಿ ಜಮೀನು ಇದೆ. ಅವುಗಳೆಂದರೆ ಸರ್ವೆ ನಂ. 37 ರಲ್ಲಿ 4 ಎಕರೆ 28 ಗುಂಟೆ, 7/3 ರಲ್ಲಿ 1 ಎಕರೆ 14 ಗುಂಟೆ, 7/4 ರಲ್ಲಿ 31 ಗುಂಟೆ 4 ರಲ್ಲಿ 13 ಗುಂಟೆ, 109 ರಲ್ಲಿ 3 ಎಕರೆ 24 ಗುಂಟೆ, 32 ರಲ್ಲಿ 2 ಎಕರೆ 39 ಗುಂಟೆಯಾಗಿದೆ. ನನ್ನ ತಾತನಿಗೆ ಲ್ಯಾಂಡ್ ರಿಫಾರ್ಮ ಸ್ ಕಾಯ್ದೆ ಯಡಿ ಯಾವುದೇ ಜಮೀನು ಬಂದಿಲ್ಲ. ಮೇಲಿನ ಆಸ್ತಿಗಳು ತಾತನ ಪಿತ್ರಾರ್ಜಿತ ಆಸ್ತಿಗಳು. ಅದಕ್ಕೆ ನನ್ನಲ್ಲಿ ಯಾವುದೇ ದಾಖಲೆಗಳು ಇಲ್ಲ. ದಾವಾಸ್ತಿಗಳ 2012 ರ ಹಿಂದಿನ ಪಹಣಿಗಳನ್ನು ನಾನು ತೆಗೆದುಕೊಂಡಿಲ್ಲ. ನಿಪಿ-4 ರಲ್ಲಿ 1 ಎಕರೆ 19 ವರೆ ಗುಂಟೆ 1 ನೇ ಪ್ರತಿವಾದಿಗೆ ಭೂಸುಧಾರಣೆ ಕಾಯ್ದೆಯಡಿ ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-4 ರಲ್ಲಿ ತಾತನ ಹೆಸರಿನಲ್ಲಿ 29 ಮುಕ್ಕಾಲು ಗುಂಟೆ ಜಮೀನು ಇದ್ದು ಪಿತ್ರಾರ್ಜಿತ ಎಂದು ಬರೆದಿದೆ ಎಂದರೆ ಸರಿ. ದಾವಾಸ್ತಿ ಬಿಟ್ಟರೆ ಬೇರೆಯಾವುದೇ ಆಸ್ತಿ ನಮ್ಮ ಕುಟುಂಬಕ್ಕೆ ಇಲ್ಲ. ಸರ್ವೆ ನಂ. 32 ರಲ್ಲಿ 1 ಎಕರೆ 19 ವರೆ ಗುಂಟೆ 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನಾನು ಹುಟ್ಟುವ ಮೊದಲೆ ನನ್ನ ತಂದೆ ವಿಭಾಗವಾಗಿ ಬೇರೆ ಹೋಗಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಎಲ್ಲಾ ಅಣ್ಣತಮ್ಮಂದಿರು ಬೇರೆ ಬೇರೆ

ವಾಸವಾಗಿದ್ದಾರೆ. ದಾವಾಸ್ತಿಗಳಿಗೆ ಕಟ್ಟಿದ ಕಂದಾಯ ರಶೀದಿಗಳು ನನ್ನಲ್ಲಿವೆ. ದಾವಾಸ್ತಿಗಳನ್ನು ಸರ್ವೆ ಮಾಡಿಸಿಲ್ಲ. ವಾದಿ ದಾವೆ ಹೂಡುವ ಮೊದಲು ಪ್ರತಿವಾದಿಯರಿಗೆ ನೋಟೀಸ್ ನೀಡಿದ್ದಾರೆ. ವಿಭಾಗವಾದ ವಿಚಾರ ನನ್ನ ತಂದೆಗೆ ತಿಳಿದಿದೆ ನ್ಯಾಯಾಲಯಕ್ಕೆ ಬಂದರೆ ಆ ವಿಚಾರ ಗೊತ್ತಾಗುತ್ತದೆ ಎಂದು ನಾನು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನಮಗೆ ಯಾವುದೇ ಪಾಲಿಲ್ಲವೆಂದರೆ ಸರಿಯಲ್ಲ. 1970 ರಲ್ಲಿ ಆದ ಪಾಲುಪಾರಿಕತ್ತಿನಂತೆ ಆಸ್ತಿಗಳಿಗೆ ಖಾತೆಯಾಗಿದೆ ಎಂದರೆ ಸರಿಯಲ್ಲ. ಮೊದಲನೆ ಪ್ರತಿವಾದಿಯ ಆಸ್ತಿಗಳನ್ನು ಸೇರಿಸಿಕೊಂಡು ವಿಭಾಗಕ್ಕಾಗಿ ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಇತರೆ ಪ್ರತಿವಾದಿ ಪರ ವಕೀಲರು ಗೈರುಹಾಜರಿರುವ ಕಾರಣ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್, ಆಲೂರು